


ನಟಿ ಅಮೃತಾ ಅಯ್ಯಂಗಾರ್ ಹಾಗೂ ಕ್ರಿಕೆಟ್ ಆಟಗಾರ್ತಿ ವೇದಾ ಕೃಷ್ಣಮೂರ್ತಿ: 'ಮೈತ್ರಿ ಮುಟ್ಟಿನ ಕಪ್' ರಾಯಭಾರಿಗಳು

'ನಾನು 2010ರಿಂದ 2023ರವರೆಗೆ ಕೊಪ್ಪಳ ಜಿಲ್ಲೆಯ ಶಾಲೆಯೊಂದರಲ್ಲಿ ಕೆಲಸ ಮಾಡುತ್ತಿದ್ದೆ. ಅಲ್ಲಿ ವಿದ್ಯಾರ್ಥಿನಿಯು ದೊಡ್ಡವಳಾದ ತಕ್ಷಣ ಆಕೆಗೆ ಮದುವೆ ಮಾಡಲು ಪೋಷಕರು ಮುಂದಾಗುತ್ತಿದ್ದರು. ಇದೊಂದು ಎಲ್ಲರಿಗೂ ಸಮ್ಮತಿ ಇರುವ ವಿಷಯವಾದ್ದರಿಂದ ಯಾರೂ ಆಕ್ಷೇಪವನ್ನೇ ಎತ್ತುತ್ತಿರಲಿಲ್ಲ. ಬಾಲ್ಯವಿವಾಹ ಅಪರಾಧ ಎಂದು ತಿಳಿಹೇಳುವುದೂ ಕಷ್ಟವೇ ಆಗಿತ್ತು. ಯಾಕೆಂದರೆ, ಹಾಗೆ ತಿಳಿಹೇಳಬೇಕಾದ ಸ್ಥಾನದಲ್ಲಿ ಇರುವವರ ಮನೆಯಲ್ಲಿಯೂ ಅಂತಹುದೇ ಬಾಲ್ಯವಿವಾಹ ನಡೆಯುತ್ತಿರಬೇಕಾದರೆ ಇತರರಿಗೆ ಹೇಳುವುದಾದರೂ ಏನನ್ನು? ದೊಡ್ಡವಳಾದ ಹುಡುಗಿ ಶಾಲೆಗೆ ಬರದೇ, ಶಿಕ್ಷಕರ ಕಣ್ಣಮುಂದೆಯೇ ಕೂಲಿ ಕೆಲಸಕ್ಕೆ ಹೋಗುತ್ತಿದ್ದರೂ ಏನೂ ಹೇಳಲಾರದ ಸ್ಥಿತಿ ಇದೆ. ತಳವರ್ಗದ ಸಮುದಾಯದಲ್ಲಿ ಬಡತನವಿದ್ದಾಗ, ಹೆಣ್ಣುಮಕ್ಕಳನ್ನು ಆದಷ್ಟು ಬೇಗ ಮದುವೆ ಮಾಡಿಕೊಡುವುದೇ ಕ್ಷೇಮ ಎಂಬ ಭಾವವಿದೆ. ದೇವದಾಸಿ ಪದ್ಧತಿಯು ಇದ್ದಂತಹ ಕೆಲವು ಜಿಲ್ಲೆಗಳಲ್ಲಿ, ಪ್ರಸ್ತುತ ಆ ಪದ್ಧತಿಯು ಆಚರಣೆಯಲ್ಲಿ ಇಲ್ಲದೇ ಇದ್ದರೂ, ಹೆಣ್ಣುಮಕ್ಕಳಿಗೆ ಬೇಗನೇ ಮದುವೆ ಮಾಡುವುದು ಅವರ ಪಾಲಿಗೆ ಗೌರವದ ವಿಷಯವಾಗಿರುತ್ತದೆ. ಬಡತನದಲ್ಲಿರುವ ಕುಟುಂಬಗಳ ಸಮಸ್ಯೆ ಒಂದು ರೀತಿಯದ್ದಾದರೆ, ಶ್ರೀಮಂತ ಕುಟುಂಬಗಳು ಕೂಡ ಮಕ್ಕಳನ್ನು ಬೇಗನೇ ಅದ್ದೂರಿಯಾಗಿ ಮದುವೆ ಮಾಡಿಕೊಟ್ಟು ಅವರಿಗೆ ಸುರಕ್ಷಿತ ಬದುಕನ್ನು ಕಲ್ಪಿಸುವ ಉತ್ಸಾಹದಲ್ಲಿರುತ್ತವೆ. ಒಟ್ಟಿನಲ್ಲಿ ಹುಡುಗಿಯೊಬ್ಬಳು ದೊಡ್ಡವಳಾದ



ಶಾಲೆಗಳಲ್ಲಿ ವಿದ್ಯಾರ್ಥಿನಿಯರು ಕಿಶೋರಾವಸ್ಥೆಗೆ ಬರುವ ಸಂದರ್ಭದಲ್ಲಿ ಅವರನ್ನು ಹೆಚ್ಚಿನ ಕಾಳಜಿಯಿಂದ ನೋಡಿಕೊಳ್ಳುವುದು ಮುಖ್ಯ. ಈ ನಿಟ್ಟಿನಲ್ಲಿ ಶಾಲೆಯಲ್ಲಿ ಶಿಕ್ಷಕ–ಶಿಕ್ಷಕಿಯರಿಬ್ಬರಿಗೂ ತರಬೇತಿ ನೀಡಬೇಕು. ವಿದ್ಯಾರ್ಥಿನಿಯರು ತಮ್ಮ ಪರಿಸ್ಥಿತಿಯನ್ನು ಹೇಳಿಕೊಳ್ಳುವಂತೆ ಮತ್ತು ಅವರ ಅಗತ್ಯಗಳನ್ನು ಕೇಳುವಂತಹ ವಾತಾವರಣ ನಿರ್ಮಿಸುವುದು ಶಾಲಾ ಆಡಳಿತ ಮಂಡಳಿಯ ಹೊಣೆಗಾರಿಕೆಯಾಗಿದೆ.

**-ಎಚ್‌.ಸಿ. ರಾಘವೇಂದ್ರ**

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ನಿಗಾ ಕೇಂದ್ರದ ಸದಸ್ಯರು

## ಮುಟ್ಟಿನ ಬಡತನ!

ಮುಟ್ಟು ಎನ್ನುವುದು ಮನುಕುಲವನ್ನು ಮುನ್ನಡೆಸುವ ಜೀವಚಲನೆ. ಪ್ರಕೃತಿಯು ಕೊಟ್ಟಿರುವ ವರ. ಕೋಟ್ಯಂತರ ಮಹಿಳೆಯರು ಮುಟ್ಟಾಗುತ್ತಿದ್ದಾರೆ. ಅವರ ಘನತೆಯನ್ನು ಗೌರವಿಸಬೇಕು ಎನ್ನುವ ನಾಗರಿಕತೆಯ ಪರಿಪಾಟವು ಇತ್ತೀಚೆಗಿನ ಕೆಲವು ದಶಕಗಳಲ್ಲಷ್ಟೇ ಆರಂಭವಾಗಿದೆ. ಆದರೆ ಆ ನಿಟ್ಟಿನಲ್ಲಿ ಎಲ್ಲರಲ್ಲಿಯೂ ಅರಿವು ಮೂಡಿಸುವ, ಎಲ್ಲರ ಮನಸ್ಸನ್ನೂ ಬದಲಾಯಿಸುವ, ತಪ್ಪು ಕಲ್ಪನೆಯನ್ನು ಹೋಗಲಾಡಿಸುವುದು ಈ ಆಧುನಿಕ ಯುಗದಲ್ಲಿಯೂ ಸಾಧ್ಯವಾಗಿಲ್ಲ. ಅರಿವು ಮೂಡಿಸುವ ಈ ಪ್ರಕ್ರಿಯೆ ನಿರಂತರವಾಗಿರಬೇಕಾಗಿದೆ. ಈ ನಡುವೆ ಮುಟ್ಟಿನ ಸಂದರ್ಭಗಳಲ್ಲಿ ಸ್ವಚ್ಛತೆಗಾಗಿ ಬೇಕಾಗುವ ಸೌಕರ್ಯಗಳನ್ನು ಒದಗಿಸಲು ಸಾಧ್ಯವಿಲ್ಲದ ಸ್ಥಿತಿಯನ್ನು 'ಮುಟ್ಟಿನ ಬಡತನ' ಎಂದು ಗುರುತಿಸಲಾಗುತ್ತದೆ. ವಿಶ್ವಸಂಸ್ಥೆಯು ಜಾಗತಿಕವಾಗಿ ಮಹಿಳೆಯರ ಈ ಸ್ಥಿತಿಗತಿಯನ್ನು ಅಧ್ಯಯನ ಮಾಡಿ ವರದಿ ಮಾಡಿದೆ. ಆ ವರದಿಯಂತೆ, ಮುಟ್ಟಿನ ಅಗತ್ಯಗಳನ್ನು ಪೂರೈಸಲಾಗದ ಸಮಾಜದಲ್ಲಿ ಮಹಿಳೆಯರು ತಮ್ಮ ಸ್ವಾತಂತ್ರ್ಯದಿಂದ ವಂಚಿತರಾಗುತ್ತಾರೆ; ಸಾಮಾನ್ಯ ಜೀವನ ನಿರ್ವಹಣೆಯ ಹಕ್ಕಿನಿಂದಲೂ ವಂಚಿತರಾಗುತ್ತಾರೆ. ಅಲ್ಲದೆ ಅವರನ್ನು ಮುಟ್ಟಿನ ಬಡತನಕ್ಕೆ ತಳ್ಳುವ ವ್ಯವಸ್ಥೆಯು ಅರಿವಿನ ಬಡತನದಿಂದ ನರಳುತ್ತಿದೆ ಎನ್ನುವುದೂ ಸತ್ಯವಾಗಿದೆ.

ಸ್ಯಾನಿಟರಿ ಪ್ಯಾಡುಗಳ ಬೆಲೆ, ಶೌಚಾಲಯ ಬಳಕೆಗೆ ವಿಧಿಸುವ ಶುಲ್ಕ, ಲಿಂಗತ್ವದ ಸಂವೇದನೆ ಇಲ್ಲದೆಯೇ ರೂಪುಗೊಳ್ಳುವ ತೆರಿಗೆ ವ್ಯವಸ್ಥೆಗಳು ಕೂಡ ಮುಟ್ಟಿನ ಬಡತನವನ್ನು ಕ್ರೂರಗೊಳಿಸುತ್ತವೆ. ಮಹಿಳೆಯರು ಬಳಸುವ ವಸ್ತುಗಳಿಗೆ ವಿಧಿಸುವ 'ಪಿಂಕ್ ಟ್ಯಾಕ್ಸ್' ವ್ಯವಸ್ಥೆಯ ಸಂವೇದನಾರಾಹಿತ್ಯಕ್ಕೆ ಒಂದು ಉದಾಹರಣೆಯಷ್ಟೇ. ಕೆಲವು ದೇಶಗಳಲ್ಲಿ 'ವಯಾಗ್ರ'ವು ತೆರಿಗೆ ಮುಕ್ತ ಆರೋಗ್ಯ ಉತ್ಪನ್ನ ಎಂದು ಪರಿಗಣನೆಗೊಂಡಿದ್ದರೆ, ಸ್ಯಾನಿಟರಿ ಪ್ಯಾಡುಗಳನ್ನು ಐಷಾರಾಮಿ ವಸ್ತು ಎಂದು ಪರಿಗಣಿಸಿ ಹೆಚ್ಚಿನ ತೆರಿಗೆ ವಿಧಿಸಲಾಗುತ್ತದೆ.

ಜಾಗತಿಕವಾಗಿ ಶ್ರೀಮಂತ ರಾಷ್ಟ್ರಗಳೆಂದು ಗುರುತಿಸಿಕೊಂಡ ದೇಶಗಳಲ್ಲಿಯೂ 'ಮುಟ್ಟಿನ ಬಡತನ' ಇದೆ ಎನ್ನುವುದು ವಿಸ್ಮಯ. ನಗರಗಳಲ್ಲಿ ವಾಸಿಸುವ ಮಹಿಳೆಯರು ಕೊಂಚಮಟ್ಟಿಗೆ ಸೌಕರ್ಯಗಳನ್ನು ಹೊಂದಿದ್ದರೂ ಹಳ್ಳಿಗಳಲ್ಲಿ ಮಹಿಳೆಯರಿಗೆ ಸೌಕರ್ಯಗಳೇ ಇರುವುದಿಲ್ಲ. ಬಾಂಗ್ಲಾದೇಶ, ಈಜಿಪ್ಟ್, ಮಡಗಾಸ್ಕರ್, ಜಿಂಬಾಬ್ವೆ ಮುಂತಾದ ದೇಶಗಳ ನಗರಗಳಲ್ಲಿ ವಾಸಿಸುವ ಮಹಿಳೆಯರಿಗೆ ಸ್ಯಾನಿಟರಿ ಪ್ಯಾಡುಗಳು ದೊರೆಯಬಹುದು. ಹಳ್ಳಿಗಳಲ್ಲಿ ಈ ಲಭ್ಯತೆ ಕಡಿಮೆ. ಅಮೆರಿಕದಂಥ ದೇಶಗಳಲ್ಲಿಯೂ ನಾಲ್ವರಲ್ಲಿ ಒಬ್ಬಳು ಹದಿಹರೆಯದ ಹುಡುಗಿ, ಮೂವರಲ್ಲಿ ಒಬ್ಬಳು ಮಹಿಳೆ ಮುಟ್ಟಿನ ಸಂದರ್ಭದಲ್ಲಿ ಅಗತ್ಯವಿರುವ ವಸ್ತುಗಳನ್ನು ಖರೀದಿಸಲು ಪರದಾಡುವ ಪರಿಸ್ಥಿತಿಯಿದೆ. ಕಡಿಮೆ ಆದಾಯದ ಕುಟುಂಬಗಳಲ್ಲಿ ಪರಿಸ್ಥಿತಿ ಏನೂ ಚೆನ್ನಾಗಿರುವುದಿಲ್ಲ. 'ಪ್ಲಾನ್ ಇಂಟರ್‌ನ್ಯಾಷನಲ್ 2020'ರಲ್ಲಿ ನಡೆಸಿದ ಸರ್ವೆಯನ್ನು ಗಮನಿಸಿದರೆ ಯುನೈಟೆಡ್ ಕಿಂಗ್‌ಡಂನಲ್ಲಿಯೂ ಹತ್ತರಲ್ಲಿ ಮೂವರು ಮಹಿಳೆಯರು ಅಗತ್ಯ ಸೌಕರ್ಯ ಪಡೆಯಲು ಹೆಣಗಾಡಬೇಕಾಗುತ್ತದೆ ಎಂದರೆ, ಇದು ಅರಿವಿನ ಕೊರತೆಯಲ್ಲದೆ ಮತ್ತೇನು? ಹೀಗೆ ಒಂದೊಂದು ದೇಶದಲ್ಲಿ ಒಂದೊಂದು ರೀತಿಯ ಸಮಸ್ಯೆ ಇದ್ದೇ ಇರುತ್ತದೆ. ಯುದ್ಧಪೀಡಿತ ದೇಶಗಳ ಪರಿಸ್ಥಿತಿಯಂತೂ ಮಹಿಳೆಯರ ಪಾಲಿಗೆ ಅತ್ಯಂತ ಕಠಿಣವಾಗಿದೆ.